# ಸುಜ್ಞಾನನಿಧಿ ಶಿಷ್ಯವೇತನ ಮಾಹಿತಿ ಪತ್ರ 2025–26

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ (ರಿ.),ನ ಬೆಳ್ಳಿಹಬ್ಬದ ಆಚರಣೆಯ ಸವಿನೆನಪಿಗಾಗಿ, ಯೋಜನೆಯ ಪಾಲುದಾರ ಕುಟುಂಬದ ಸ್ವ–ಸಹಾಯ ಹಾಗೂ ಪ್ರಗತಿಬಂಧು ಸಂಘಗಳ, ಆರ್ಥಿಕವಾಗಿ ಹಿಂದುಳಿದ ಸದಸ್ಯರ ಮಕ್ಕಳ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ನೆರವಾಗಲು ಪೂಜ್ಯ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು 2007 ರಲ್ಲಿ ಸುಜ್ಞಾನನಿಧಿ ಶಿಷ್ಯವೇತನ ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಸುಜ್ಞಾನನಿಧಿ ಕಾರ್ಯಕ್ರಮದಡಿಯಲ್ಲಿ ಶೈಕ್ಷಣಿಕ ವರ್ಷಕ್ಕೆ ಅನುಗುಣವಾಗಿ ಎರಡರಿಂದ ಐದು ವರ್ಷದ ಅವಧಿಯ ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಗಳಿಗೆ ಸಂಸ್ಥೆಯು ನಿಗದಿಪಡಿಸಿದ ಆಯ್ದ ಕೋರ್ಸಿಗೆ ಅನುಗುಣವಾಗಿ ರೂಪಾಯಿ 400 ರಿಂದ ರೂಪಾಯಿ 1000 ಸಾವಿರದವರೆಗೆ ಮಾಸಿಕ ಶಿಷ್ಯವೇತನವನ್ನು ಪಾವತಿಸಲಾಗುತ್ತಿದೆ. ಕರ್ನಾಟಕ ರಾಜ್ಯಾದ್ಯಂತ ಇದುವರೆಗೂ 1 ಲಕ್ಷ 25 ಸಾವಿರ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ರೂ 152.75 ಕೋಟಿ ಶಿಷ್ಯವೇತನವನ್ನು ಇದುವರೆಗೆ ವಿತರಿಸಲಾಗಿದೆ.

## 2025–26ನೇ ಸಾಲಿಗೆ ಸುಜ್ಞಾನನಿಧಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನಿಸಿಕೊಳ್ಳುವುದು:

### ಆಯ್ಕೆ ಮಾಡಬಹುದಾದ ಕೋರ್ಸ್‌ಗಳು:

| | | | | | | | |
|---|---|---|---|---|---|---|---|
| B.D.S | ITI | M.B.B.S | DIPLOMA | B.Sc (Fisheries) | B.Sc(Horticulture) | B.H.M | B.Sc(Agri) |
| B.E | B.VOC | B.V.S.C | D.PHARM | NURSING ( B.Sc ) | PHISIOTHERAPY | B.V.A | L.L.B (3 years) |
| B.ED | M.B.A | B.N.Y.S | PHARM D | LABTECHNICIAN | B.Sc(Forestry) | B.A.M.S | B.Pharm |
| D. ED | B.Tech | B.H.M.S | NURSING | BSC LABTECHNICIAN | PARAMEDICAL | L.L.B (5 years) | |
| M.ED | C. A ARTICLESHIP | | | | B.Sc FORENSIC SCIENCE | | |

ಈ ಬಾರಿ ಹೊಸದಾಗಿ **Diploma** ಅಥವಾ **B.E** ಅಡಿಯಲ್ಲಿ Fire & Safety & Aviation ಕೋರ್ಸುಗಳಿಗೆ ಅರ್ಜಿ ಸಲ್ಲಿಕೆಗೆ ಅವಕಾಶವಿರುತ್ತದೆ.

## ಹೊಸ ಅರ್ಜಿ:

1. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಯೋಜನೆ ಪ್ರಾಯೋಜಿತ ಸಂಘದ BPL ಕುಟುಂಬ ಸದಸ್ಯರ ಓರ್ವ ವಿದ್ಯಾರ್ಥಿನಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ.
2. ದಿನಾಂಕ 30.06.2024 ಕ್ಕಿಂತ ಮೊದಲು ಪ್ರಾರಂಭಿಸಲಾದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ (S, A+, A ಮತ್ತು B ಶ್ರೇಣಿಯಲ್ಲಿರುವ) ಸಂಘಗಳ ಸದಸ್ಯರ ಹೆಣ್ಣು ಮಕ್ಕಳು ಮಾತ್ರ ಅರ್ಜಿ ಸಲ್ಲಿಸಬಹುದು.
3. 01.04.2025 ರ ನಂತರ ಕಾಲೇಜಿಗೆ ದಾಖಲಾದ ಮೊದಲ ಸೆಮಿಸ್ಟರ್‌ನ ವಿದ್ಯಾರ್ಥಿನಿಯರು ಮಾತ್ರ ಅರ್ಜಿ ಸಲ್ಲಿಸಬಹುದು. (ಈ ಬಗ್ಗೆ ಕಾಲೇಜು ದೃಢೀಕರಣದಲ್ಲಿ (ನಮೂನೆ 2) ದಾಖಲಾತಿಯ ಬಗ್ಗೆ ಸರಿಯಾದ ಮಾಹಿತಿಯ ವಿವರವನ್ನು ತುಂಬಿ ಕಾಲೇಜು ಮುಖ್ಯಸ್ಥರ ಸಹಿ & ಸ್ಪಷ್ಟವಾದ ಮೊಹರನ್ನು ಕಡ್ಡಾಯವಾಗಿ ಹಾಕಿಸುವುದು.)
4. ವರ್ಷಕ್ಕೆ ರೂ. 5000 ಕ್ಕಿಂತ ಕಡಿಮೆ ಮೊತ್ತದ ವಿದ್ಯಾರ್ಥಿವೇತನವನ್ನು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಕೆಗೆ ಅವಕಾಶ. ನಮೂನೆ 2 ರಲ್ಲಿ ಕಾಲೇಜಿನಲ್ಲಿ ಧೃಢಿಕರಿಸಲ್ಪಟ್ಟಿರಬೇಕು.
5. ವಿದ್ಯಾರ್ಥಿನಿಯು IFSC CODE ನ್ನು ಹೊಂದಿರುವ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆಯನ್ನು ಹೊಂದಿರಬೇಕು. ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಬ್ಯಾಂಕ್ ಅಧಿಕಾರಿಗಳ ಸಹಿ ಮತ್ತು ಮುದ್ರೆ ಕಡ್ಡಾಯವಾಗಿ ಇರಬೇಕು. ಖಾತೆಯಲ್ಲಿ ವ್ಯವಹಾರಗಳು ಇತ್ತೀಚಿನ ಮೂರು ತಿಂಗಳಿನಿಂದ ಚಾಲ್ತಿಯಲ್ಲಿರಬೇಕು.
6. ದಿವ್ಯಾಂಗರು (ಸರಕಾರದ ಅಂಗವೈಕಲ್ಯ ಕಾರ್ಡು ಹೊಂದಿರಬೇಕು), ಅನಾಥರು ಮತ್ತು ಏಕ ಪೋಷಕರನ್ನು ಹೊಂದಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದ್ದಲ್ಲಿ ಸಂಘದ ಸದಸ್ಯರ ಮಕ್ಕಳು ಅಲ್ಲದೇ ಇದ್ದರೂ ಒಕ್ಕೂಟ ಪದಾಧಿಕಾರಿಗಳ ಶಿಫಾರಸ್ಸಿನೊಂದಿಗೆ ನಮೂನೆ–5ನ್ನು ಸಮುದಾಯ ಅಭಿವೃದ್ಧಿ ವಿಭಾಗಕ್ಕೆ ಸಲ್ಲಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಮಂಜೂರಾತಿ ನಂತರವೇ ಅರ್ಜಿ ಸಲ್ಲಿಸುವುದು. (**Special Case** ಅರ್ಹರಾಗಿದ್ದಲ್ಲಿ ಮಾತ್ರ)
7. ರಾಜ್ಯಾದ್ಯಂತ ಅನಾಥಾಶ್ರಮದಲ್ಲಿ ಇದ್ದು ಅನಾಥಾಶ್ರಮದ ಉಸ್ತುವಾರಿಯಲ್ಲಿ ತಾಂತ್ರಿಕ ಮತ್ತು ವೃತ್ತಿಪರ ಕೋರ್ಸು ಓದುತ್ತಿರುವ ಅನಾಥ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. ಇದಕ್ಕಾಗಿ ನಮೂನೆ 6 ರಲ್ಲಿ ವಿವರಗಳನ್ನು ಭರ್ತಿ ಮಾಡಿ ಅನಾಥಾಶ್ರಮ ಸಂಸ್ಥೆಯ ಮುಖ್ಯಸ್ಥರ ಸಹಿಯೊಂದಿಗೆ ಸಮುದಾಯ ಅಭಿವೃದ್ಧಿ ವಿಭಾಗಕ್ಕೆ ಸಲ್ಲಿಸಿ ನಂತರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಮಂಜೂರಾತಿ ನಂತರವೇ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವುದು.

## ನವೀಕರಣ ಅರ್ಜಿ:

1. ಕಳೆದ ವರ್ಷಗಳಲ್ಲಿ ಅರ್ಜಿ ಸಲ್ಲಿಸಿ ಮಂಜೂರಾತಿಗೊಂಡಿರುವ ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ.
2. ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ (S, A+, A ಮತ್ತು B ಶ್ರೇಣಿಯಲ್ಲಿರುವ) ಸಂಘಗಳ ಸದಸ್ಯರ ಮಕ್ಕಳು ಮಾತ್ರ ನವೀಕರಣ ಅರ್ಜಿ ಸಲ್ಲಿಸಬಹುದು.
3. ವಿದ್ಯಾರ್ಥಿಯು 2024–25 ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಕೋರ್ಸಿನ ಎಲ್ಲಾ ವಿಷಯಗಳಲ್ಲಿ ಮೊದಲನೇ ಪ್ರಯತ್ನದಲ್ಲಿ ಉತ್ತೀರ್ಣರಾಗಿದ್ದಲ್ಲಿ ಮಾತ್ರ ನವೀಕರಣ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
4. ವಿದ್ಯಾರ್ಥಿಯು ಹಿಂದಿನ ವರ್ಷ ಸುಜ್ಞಾನನಿಧಿ ಪಡೆಯುವ ಸಂದರ್ಭ ನೀಡಿದ ಬ್ಯಾಂಕ್ ಖಾತೆ ಸಂಖ್ಯೆಯನ್ನೇ ನೀಡುವುದು. ಈ ಹಿಂದೆ ನೀಡಿದ ಬ್ಯಾಂಕ್‌ನ **Account Number / Branch** ಬದಲಾವಣೆ ಇದ್ದಲ್ಲಿ ನಮೂನೆ 3 ನ್ನು ಯೋಜನಾ ಕಛೇರಿಯಿಂದ ಪಡಕೊಂಡು ಅದರಲ್ಲಿ ಬದಲಾವಣೆ ಗೆ ಕಾರಣ & ಇತರ ವಿವರಗಳನ್ನು ಭರ್ತಿ ಮಾಡಿ ಅಪ್‌ಡೇಟ್ ಮಾಡಿದ ಹೊಸ ಪಾಸ್ ಪುಸ್ತಕದಲ್ಲಿ ಶಾಖಾ ಪ್ರಬಂಧಕರ ಸಹಿ ಮತ್ತು ಮೊಹರು ಕಡ್ಡಾಯವಾಗಿ ಹಾಕಿಸಿ Upload ಮಾಡುವುದು.
5. ಪ್ರಸ್ತುತ ವಿದ್ಯಾರ್ಜನೆ ಮಾಡುತ್ತಿರುವ ಕೋರ್ಸ್ ಯಾ ಶಿಕ್ಷಣ ಸಂಸ್ಥೆಯನ್ನು ಬದಲಾಯಿಸಿ ಬೇರೆ ಕೋರ್ಸ್ ಯಾ ಶಿಕ್ಷಣ ಸಂಸ್ಥೆಗೆ ಸೇರ್ಪಡೆಗೊಂಡರೆ ಶಿಷ್ಯವೇತನ ಮುಂದುವರಿಸಲಾಗುವುದಿಲ್ಲ.

## ಗಮನಿಸಬೇಕಾದ ಇತರ ಅಂಶಗಳು:

1. ಸದಸ್ಯರು/ವಿದ್ಯಾರ್ಥಿಯು ಮೇಲೆ ತಿಳಿಸಿದ ಎಲ್ಲಾ ಶೈಕ್ಷಣಿಕ ಹಾಗೂ ವೈಯಕ್ತಿಕ ಮಾಹಿತಿಯೊಂದಿಗೆ ಖುದ್ದಾಗಿ SKDRDP ಯ ತಮ್ಮ ತಾಲೂಕು ಯೋಜನಾ ಕಛೇರಿಯಲ್ಲಿ ಮನವಿ ಪತ್ರ (ನಮೂನೆ 1) ನೀಡಿ ಅರ್ಜಿ ಸಲ್ಲಿಸಲು ಮಾತ್ರ ಅವಕಾಶ.
2. ಸುಜ್ಞಾನನಿಧಿ ಶಿಷ್ಯವೇತನದ ಅರ್ಜಿಯನ್ನು ಯಾವುದೇ ಕಾರಣಕ್ಕೂ ಅಂಚೆ ಮೂಲಕ ಸ್ವೀಕರಿಸಿ ಪರಿಗಣಿಸಲಾಗುವುದಿಲ್ಲ.
3. ಸಂಸ್ಥೆಯು ನಿಗದಿಪಡಿಸಿದ ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ಮಾತ್ರವೇ ಶಿಷ್ಯವೇತನ ನೀಡಲಾಗುವುದು.
4. ಸುಜ್ಞಾನನಿಧಿ ಶಿಷ್ಯವೇತನ ಪಡೆದ ನಂತರ ವಿನಾಕಾರಣ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡು, ಮುಂದಿನ ತರಗತಿಗೆ ಹೋಗಲು ಅರ್ಹರಲ್ಲದ ಹಾಗೂ ಶಿಕ್ಷಣವನ್ನು ಮಧ್ಯದಲ್ಲೇ ಕೈ ಬಿಟ್ಟು ಬೇರೆ ಶಿಕ್ಷಣಕ್ಕಾಗಲಿ, ವೃತ್ತಿಗಾಗಲಿ ಸೇರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಮುಂದುವರಿಸಲಾಗುವುದಿಲ್ಲ.
5. ಮೊದಲನೇ ವ್ಯಾಸಂಗ ವರ್ಷದ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸದೇ ನೇರವಾಗಿ 2ನೇ ವರ್ಷಕ್ಕೆ ಮತ್ತು LATERAL ENTRY ಮೂಲಕ ಎರಡನೇ ವರ್ಷದ ಕೋರ್ಸಿಗೆ (ಉದಾ: DIPLOMA ಮೂಲಕ B.E ಮಾಡುವ ವಿದ್ಯಾರ್ಥಿಗಳು) ಆಯ್ಕೆಯಾಗುವ, ಯಾವುದೇ ರೀತಿಯ CORESPONDENCE ಕೋರ್ಸ್‌ಗಳಿಗೆ ಹಾಗೂ ತಾಂತ್ರಿಕ, ವೃತ್ತಿಪರ ಕೋರ್ಸಿಗೆ ಒಂದು ಬಾರಿ ಶಿಷ್ಯವೇತನ ಪಡೆದವರು ಎರಡನೇ ಬಾರಿಗೆ ಇತರ ಕೋರ್ಸುಗಳ ಅಧ್ಯಯನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಸುಜ್ಞಾನನಿಧಿ ಶಿಷ್ಯವೇತನ ನೀಡಲಾಗುವುದಿಲ್ಲ.
6. ವಿದ್ಯಾರ್ಥಿಯು ಯೋಜನಾ ಕಛೇರಿಗೆ ತರಬೇಕಾದ ಎಲ್ಲಾ ದಾಖಲಾತಿಗಳನ್ನು ನಮೂನೆ–1 ರಲ್ಲಿ ಉಲ್ಲೇಖಿಸಲಾಗಿದೆ. ಯೋಜನಾ ಕಛೇರಿಗೆ ಅರ್ಜಿ ಸಲ್ಲಿಕೆಗೆ ಹೋಗುವ ಸಂದರ್ಭ ವಿದ್ಯಾರ್ಥಿಯು ಆ ಎಲ್ಲಾ ದಾಖಲಾತಿಗಳು ಸಮರ್ಪಕವಾಗಿ ಇರುವ ಬಗ್ಗೆ ಪರಿಶೀಲಿಸಿ ದೃಢೀಕರಿಸುವುದು.
7. ಸುಜ್ಞಾನನಿಧಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿ ಹೆಸರು ಸಂಘದಲ್ಲಿರುವ ಪೋಷಕ ಸದಸ್ಯರ **BPL** ರೇಷನ್ ಕಾರ್ಡ್‌ನಲ್ಲಿ ಇರುವುದನ್ನು ಖಾತ್ರಿಪಡಿಸಿಕೊಳ್ಳುವುದು.
8. ಈ ಬಾರಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ಜೊತೆಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ವಿಲೀನಗೊಂಡಿರುವುದರಿಂದ ಅರ್ಜಿ ಸಲ್ಲಿಕೆ ಮಾಡುವಾಗ ವಿದ್ಯಾರ್ಥಿಯು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ **IFSC Update** ಮಾಡಿರುವ ಬ್ಯಾಂಕ್ ಪಾಸ್ ಬುಕ್‌ನ್ನು ತಂದಲ್ಲಿ ಮಾತ್ರವೇ ಅರ್ಜಿ ಸಲ್ಲಿಕೆ ಸಾಧ್ಯವಾಗುವುದು.
9. ಯಾವುದೇ ತಪಾವತುಗಳು ಬಾರದ ರೀತಿಯಲ್ಲಿ ನಮೂನೆ 1 ಅರ್ಜಿಯನ್ನು ಭರ್ತಿಗೊಳಿಸುವುದು. ಒಮ್ಮೆ ಅರ್ಜಿ ಸಲ್ಲಿಕೆ ಮಾಡಿದ ನಂತರ ಮತ್ತೆ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ. ಸಲ್ಲಿಸಿದ ಅರ್ಜಿಯು ಅಸಮರ್ಪಕವಾಗಿದ್ದರೆ, ಅಸ್ಪಷ್ಟವಾಗಿದ್ದರೆ, ತಪಾವತುಗಳಿದ್ದರೆ ಅಂತಹ ಅರ್ಜಿಗಳನ್ನು ಪ್ರಥಮ ಹಂತದಲ್ಲಿಯೇ ತಿರಸ್ಕರಿಸಲಾಗುವುದು.
10. ಒಂದೇ ಕುಟುಂಬದ ಒಬ್ಬ ವಿದ್ಯಾರ್ಥಿಗೆ ಒಂದು ಬಾರಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಇರುತ್ತದೆ.
11. ಪ್ರಥಮ ವರ್ಷಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಏಪ್ರಿಲ್ 2025 ರ ನಂತರದಲ್ಲಿ ತರಗತಿ ಆರಂಭವಾಗಿ, ಪ್ರಥಮ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ದೃಢೀಕರಿಸಿಕೊಳ್ಳುವುದು. (ಈ ಹಿಂದೆ ಶಿಷ್ಯವೇತನ ಪಡೆದುಕೊಳ್ಳದೇ ಇದ್ದು, ನೇರವಾಗಿ ಎರಡನೇ ವರ್ಷಕ್ಕೆ ಅರ್ಜಿ ಸಲಿಸಲು ಅವಕಾಶ ಇರುವುದಿಲ್ಲ)

**ಎಲ್ಲಾ ದಾಖಲಾತಿಗಳು ಸರಿಯಾಗಿದೆಯೇ ಎಂದು ಮರು ಪರಿಶೀಲನೆ ಮಾಡಿ ಅರ್ಜಿಗಳ ವಿವರಗಳು ಸರಿಯಾಗಿದೆಯೇ ಎಂದು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳುವುದು.**

**ಅಡಕ:**

1. ಸುಜ್ಞಾನನಿಧಿ ಶಿಷ್ಯವೇತನ ಮನವಿ ಪತ್ರ (ನಮೂನೆ 1)
2. ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ದೃಢೀಕರಣ (ನಮೂನೆ–2)

ಈ ಮೇಲೆ ತಿಳಿಸಿರುವ ಪ್ರಕಾರ ಮಾಹಿತಿ, ಸೂಚನೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಅರ್ಜಿಗಳನ್ನು ಷರತ್ತುಗಳು ಮತ್ತು ನಿಯಮಗಳ ಅನುಸಾರ ನಿಗದಿತ ದಿನಾಂಕದೊಳಗೆ ತಪಾವತುರಹಿತವಾಗಿ ಭರ್ತಿಗೊಳಿಸಿ ಸಲ್ಲಿಸಿದಲ್ಲಿ ಮಾತ್ರ ಶಿಷ್ಯವೇತನವನ್ನು ಶೀಘ್ರಗತಿಯಲ್ಲಿ ಪಡೆಯಲು ಸಾಧ್ಯ.

**ಸುಜ್ಞಾನನಿಧಿ ಶಿಷ್ಯವೇತನ ಅರ್ಜಿ ಸಲ್ಲಿಕೆ ಪ್ರಕ್ರಿಯೆಯು ದಿನಾಂಕ 07.11.2025 ರಿಂದ ಪ್ರಾರಂಭವಾಗಿ ದಿನಾಂಕ 31.03.2026ವರೆಗೆ ಮಾತ್ರ ಸಂಬಂಧಿಸಿದ ಯೋಜನಾ ಕಛೇರಿಗಳಲ್ಲಿ ಚಾಲ್ತಿಯಲ್ಲಿರುತ್ತದೆ.**

**ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು. ದೂ : 9591770660 / 6366358320**

॥ಓಂ ಶ್ರೀ ಮಂಜುನಾಥಾಯ ನಮಃ॥
**ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) – ಕೇಂದ್ರ ಕಛೇರಿ ಧರ್ಮಸ್ಥಳ**
**ಸಮುದಾಯ ಮತ್ತು ಅಭಿವೃದ್ಧಿ ವಿಭಾಗ–ಸುಜ್ಞಾನನಿಧಿ ಶಿಷ್ಯವೇತನ ಕಾರ್ಯಕ್ರಮ**
Phone No: 9591770660/6366358320
Website: www.skdrdpindia.org Email : hocdp@skdrdpindia.org

# ಸುಜ್ಞಾನನಿಧಿ ಶಿಷ್ಯವೇತನ ಮನವಿ ಪತ್ರ (ನಮೂನೆ 1)

ಮಾನ್ಯರೇ,

________ ಜಿಲ್ಲೆ________ ತಾಲೂಕು________ ಗ್ರಾಮದ ________ ಹೆಸರಿನ ನಾನು ನನ್ನ ಮಗ/ಮಗಳಾದ ________ ಇವಳನ್ನು/ಇವನನ್ನು ________ ಸಂಸ್ಥೆಯಲ್ಲಿ ________ ಕೋರ್ಸಿನ ಐಚ್ಛಿಕ ವಿಷಯ (Specialization) ________ ಗೆ ಸೇರ್ಪಡೆಗೊಳಿಸಿ ಪ್ರಸ್ತುತ ____ ನೇ ವರ್ಷದ ತರಗತಿಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾಳೆ/ನೆ. ನಾನು ಕಳೆದ_____ ವರ್ಷಗಳಿಂದ ________ ಗುಂಪಿನ ಐ.ಡಿ ಸಂಖ್ಯೆಯ ________ ಸಂಘದಲ್ಲಿ ______ ಸದಸ್ಯತ್ವ ಸಂಖ್ಯೆಯಲ್ಲಿ ಸಕ್ರಿಯ ಸದಸ್ಯಳಾಗಿ/ನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಈಗ ನನ್ನ ಮಗಳಿಗೆ/ಮಗನಿಗೆ ಶ್ರೀ.ಕ್ಷೇ.ಧ.ಗ್ರಾ ಯೋಜನೆಯಿಂದ ನೀಡುತ್ತಿರುವ 2025–26 ನೇ ಸಾಲಿನ ಸುಜ್ಞಾನನಿಧಿ ಶಿಷ್ಯವೇತನವನ್ನು ಒದಗಿಸಿ ಕೊಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ಒಂದು ವೇಳೆ ನನ್ನ ಮಗ/ಮಗಳು ಶಿಕ್ಷಣವನ್ನು ಮಧ್ಯದಲ್ಲಿ ಕೈಬಿಟ್ಟರೆ ಪಡೆದುಕೊಂಡ ಶಿಷ್ಯವೇತನವನ್ನು ಎರಡು ತಿಂಗಳೊಳಗೆ ಸಂಪೂರ್ಣವಾಗಿ ಹಿಂತಿರುಗಿಸಲು ಬದ್ಧನಾ/ಳಾಗಿರುತ್ತೇನೆ.

**ನನ್ನ ಮಗ/ಮಗಳು ಸುಜ್ಞಾನನಿಧಿ ಹೊರತುಪಡಿಸಿ ಇತರ ಎಲ್ಲಾ ಮೂಲಗಳಿಂದ ಒಟ್ಟು ರೂ. ________ ಮೊತ್ತದ ವಿದ್ಯಾರ್ಥಿ ವೇತನ ಪಡೆಯುತ್ತಿದಾಳೆ/ನೆ.**

ವಿದ್ಯಾರ್ಥಿಯ ಇ–ಮೈಲ್ ಐಡಿ ________________ ವಿದ್ಯಾರ್ಥಿಯ ಮೊಬೈಲ್ ಸಂಖ್ಯೆ ________________

**ಸ್ಥಳ :–**
**ದಿನಾಂಕ :–** **ಪೋಷಕರ ಸಹಿ.**

---

## ಯೋಜನಾ ಕಛೇರಿಯ ಉಪಯೋಗಕ್ಕೆ ಮಾತ್ರ

ಮೇಲ್ಕಾಣಿಸಿದ ಅರ್ಜಿದಾರರಾದ ________ ಇವರು ________ ಸಂಘದಲ್ಲಿ ಕಳೆದ ___ ವರ್ಷಗಳಿಂದ ________ ಗುಂಪಿನ ಐ.ಡಿ ಸಂಖ್ಯೆಯ ___ ನೇ ಸದಸ್ಯತ್ವ ಸಂಖ್ಯೆಯಲ್ಲಿ _____ ಗ್ರೇಡ್ ಸಂಘದ ಸದಸ್ಯರಾಗಿದ್ದು, ಅವರ ಮಗ/ಮಗಳು ಸುಜ್ಞಾನನಿಧಿ ಶಿಷ್ಯವೇತನಕ್ಕಾಗಿ ಹೊಸ / ನವೀಕರಣ ಅರ್ಜಿ ಸಲ್ಲಿಸಿರುತ್ತಾರೆ.

### ಪೂರಕ ದಾಖಲಾತಿಗಳು

| ಹೊಸ ವಿದ್ಯಾರ್ಥಿಗಳಿಗೆ ಮಾತ್ರ | ನವೀಕರಣ ವಿದ್ಯಾರ್ಥಿಗಳಿಗೆ ಮಾತ್ರ |
|---|---|
| 1. ಸುಜ್ಞಾನನಿಧಿ ಶಿಷ್ಯವೇತನ ಮನವಿ ಪತ್ರ (ನಮೂನೆ 1) | 1. ಸುಜ್ಞಾನನಿಧಿ ಶಿಷ್ಯವೇತನದ ಮನವಿ ಪತ್ರ (ನಮೂನೆ1) |
| 2. ವಿದ್ಯಾರ್ಥಿಯು ಪ್ರಸ್ತುತ ವರ್ಷದ ಆಯ್ಕೆ ಮಾಡಿರುವ ಕಾಲೇಜಿನ ದೃಢೀಕರಣ ಹಾಗೂ ಶುಲ್ಕಪಾವತಿ ರಶೀದಿ. (ನಮೂನೆ 2) | 2. ಪ್ರಸ್ತುತ ವರ್ಷದ ಕಾಲೇಜು ದೃಢೀಕರಣ ಹಾಗೂ ಶುಲ್ಕಪಾವತಿ ರಶೀದಿ. (ನಮೂನೆ 2) |
| 3. ಎಸ್. ಎಸ್. ಎಲ್. ಸಿ ಅಂಕಪಟ್ಟಿ. | 3. ಎಸ್. ಎಸ್. ಎಲ್. ಸಿ ಅಂಕಪಟ್ಟಿ. |
| 4. ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಬುಕ್. | 4. ವಿದ್ಯಾರ್ಥಿಯ ಬ್ಯಾಂಕ್ ಪಾಸ್ ಬುಕ್. |
| 5. ವಿದ್ಯಾರ್ಥಿಯ ಆಧಾರ್ ಕಾರ್ಡ್. | 5. ವಿದ್ಯಾರ್ಥಿಯ ಆಧಾರ್ ಕಾರ್ಡ್. |
| 6. ವಿದ್ಯಾರ್ಥಿಯ ಕುಟುಂಬದ BPL ರೇಷನ್ ಕಾರ್ಡ್. | 6. ವಿದ್ಯಾರ್ಥಿಯ ಕುಟುಂಬದ ರೇಷನ್ ಕಾರ್ಡ್. |
| 7. ಪೋಷಕರ ಸಂಘದ ನಿರ್ಣಯ ಪುಸ್ತಕ. | 7. ಪೋಷಕರ ಸಂಘದ ನಿರ್ಣಯ ಪುಸ್ತಕ. |
| 8. ಪ್ರಸ್ತುತ ಕೋರ್ಸ್‌ಗೆ ಅರ್ಹತೆ ಪಡೆದ ಹಿಂದಿನ ವರ್ಷದ ಅಧ್ಯಯನದ ಅಂಕಪಟ್ಟಿ. | 8. ಹಿಂದಿನ ವರ್ಷ ವ್ಯಾಸಂಗ ನಡೆಸಿದ ಕೋರ್ಸಿನ ಅಂಕಪಟ್ಟಿ. |

ವಿದ್ಯಾರ್ಥಿಯ ಹೊಸ/ನವೀಕರಣ ಅರ್ಜಿ ಹಾಗೂ ಸಲ್ಲಿಸಿದ ಮೇಲ್ಕಂಡ ದಾಖಲಾತಿಗಳು ಸುತ್ತೋಲೆಯಲ್ಲಿ ಉಲ್ಲೇಖಿಸಿದ ಅರ್ಹತಾ ನಿಯಮಗಳಿಗೆ ಪೂರಕವಾಗಿರುತ್ತದೆ. ವಿದ್ಯಾರ್ಥಿಯ ಪೋಷಕರು ಯೋಜನೆಯ ಖಾಯಂ ಸಿಬ್ಬಂದಿಯಾಗಿರುವುದಿಲ್ಲ ಹಾಗೂ ಈ ಸದಸ್ಯರ ಮನೆಯಿಂದ ಓರ್ವ ವಿದ್ಯಾರ್ಥಿ ಮಾತ್ರವೇ ಅರ್ಜಿ ಸಲ್ಲಿಸಿರುತ್ತಾರೆಂದು ಈ ಮೂಲಕ ದೃಢೀಕರಿಸಿ ಸದ್ರಿಯವರಿಗೆ 2025–2026 ನೇ ಸಾಲಿನ ಸುಜ್ಞಾನನಿಧಿ ಶಿಷ್ಯವೇತನವನ್ನು ಮಂಜೂರು ಮಾಡಬಹುದು ಎಂದು ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

**(ಯೋಜನಾಧಿಕಾರಿ/ಹಣಕಾಸು ಪ್ರಬಂಧಕರ ಸಹಿ/ಮೊಹರು ಕಡ್ಡಾಯ)**

(**ವಿ.ಸೂ** : ಈ ಮನವಿ ಪತ್ರವನ್ನು ಪರಿಶೀಲನೆ ನಡೆಸಿ ಯೋಜನಾಧಿಕಾರಿಗಳ ಸಹಿಯ ನಂತರ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಮುಗಿಸಿ ಯೋಜನಾ ಕಛೇರಿಯಲ್ಲಿಯೇ ಫೈಲಿಂಗ್ ಮಾಡಿ ಇಡುವುದು ಇದರ ಹೊರತಾಗಿ ಯಾವುದೇ ದಾಖಲಾತಿಗಳ ಪ್ರತಿಗಳನ್ನು ಕಛೇರಿಯಲ್ಲಿ ಇಟ್ಟುಕೊಳ್ಳಬೇಕಾಗಿರುವುದಿಲ್ಲ).

॥ಓಂ ಶ್ರೀ ಮಂಜುನಾಥಾಯ ನಮಃ॥

**ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ.) – ಕೇಂದ್ರ ಕಛೇರಿ ಧರ್ಮಸ್ಥಳ**

**ಸಮುದಾಯ ಮತ್ತು ಅಭಿವೃದ್ಧಿ ವಿಭಾಗ–ಸುಜ್ಞಾನನಿಧಿ ಶಿಷ್ಯವೇತನ ಕಾರ್ಯಕ್ರಮ**

Phone No: 9591770660/6366358320

Website: www.skdrdpindia.org Email : hocdp@skdrdpindia.org

## ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ದೃಢೀಕರಣ (ನಮೂನೆ–2)

ವಿದ್ಯಾರ್ಥಿಯ ಹೆಸರು: .................................................. ಶಿಕ್ಷಣ ಸಂಸ್ಥೆಯ ಹೆಸರು :..............................................

ಪೋಷಕರ ಹೆಸರು: ........................................................ ಕೋರ್ಸಿನ ಹೆಸರು :.......................................................

ವಿಳಾಸ : ........................................................................ Specialization :.........................................................

ಕೋರ್ಸ್‌ನ ಒಟ್ಟು ಅವಧಿ :.........................ವರ್ಷ ಎಷ್ಟನೇ ವರ್ಷದ ಅಧ್ಯಯನ :..........................................

ಪ್ರಸ್ತುತ ವರ್ಷ ಕೋರ್ಸ್ ಪ್ರಾರಂಭವಾದ ದಿನಾಂಕ: ............................ ಮುಕ್ತಾಯಗೊಳ್ಳುವ ದಿನಾಂಕ: ....................................

ವಿದ್ಯಾರ್ಥಿಯು ನಮ್ಮ ಕಾಲೇಜಿನಲ್ಲಿ MANAGEMENT ☐ MERRIT(GOVT) ☐ ನ ಆಯ್ಕೆಯ ಮೂಲಕ ಪ್ರವೇಶಾತಿ ಪಡೆದು ಮೇಲ್ಕಂಡ ಕೋರ್ಸಿಗೆ ಸೇರ್ಪಡೆಗೊಂಡು .................ನೇ ವರ್ಷದ ತರಗತಿಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ.

- ಸದ್ರಿ ವಿದ್ಯಾರ್ಥಿಯು ನೇರವಾಗಿ LATERAL ENTRY ಯ ಮೂಲಕ ದಾಖಲಾಗಿರುವುದಿಲ್ಲ.
- ವಿದ್ಯಾರ್ಥಿಯ ಸಂಬಂಧಿಸಿದ ಕೋರ್ಸ್‌ನ ಈವರೆಗಿನ ಎಲ್ಲಾ ಸೆಮಿಸ್ಟರ್/ವಾರ್ಷಿಕ ಪರೀಕ್ಷೆಗಳ ಯಾವುದೇ ವಿಷಯಗಳಲ್ಲಿ ಅನುತ್ತೀರ್ಣತೆ (Backlog) ಇಲ್ಲವೆಂದು ದೃಢೀಕರಿಸಿದೆ.

**ಸದ್ರಿ ವಿದ್ಯಾರ್ಥಿ/ವಿದ್ಯಾರ್ಥಿನಿ ಸುಜ್ಞಾನನಿಧಿ ಹೊರತುಪಡಿಸಿ ಇತರ ಎಲ್ಲಾ ಮೂಲಗಳಿಂದ ರೂ.--------- ಮೊತ್ತದ ಶಿಷ್ಯವೇತನವನ್ನು ಪಡೆಯುತ್ತಿದ್ದಾನೆ/ಳೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.**

ಈ ವಿದ್ಯಾರ್ಥಿ/ವಿದ್ಯಾರ್ಥಿನಿಯನ್ನು ತಮ್ಮ ಸಂಸ್ಥೆಯ ವತಿಯಿಂದ ನೀಡಲ್ಪಡುವ ಸುಜ್ಞಾನನಿಧಿ ಶಿಷ್ಯವೇತನಕ್ಕೆ ಪರಿಗಣಿಸಬಹುದಾಗಿದೆ.

---

## ಶುಲ್ಕ ಪಾವತಿ ದೃಢೀಕರಣ

ಸದ್ರಿ ವಿದ್ಯಾರ್ಥಿಯು ನಮ್ಮ ಕಾಲೇಜಿನಲ್ಲಿ...................... ಕೋರ್ಸಿಗೆ ಸೇರ್ಪಡೆಗೊಂಡಿದ್ದು ಇವರು ಪ್ರಸ್ತುತ 2025–2026 ನೇ ಸಾಲಿನಲ್ಲಿ ....................ನೇ ವರ್ಷದ ವ್ಯಾಸಂಗಕ್ಕೆ ಕಾಲೇಜು ಶುಲ್ಕ...................... ಮೊತ್ತವನ್ನು........................ದಿನಾಂಕದಂದು ಪಾವತಿ ಮಾಡಿರುತ್ತಾರೆ ಎಂದು ಈ ಮೂಲಕ ದೃಢೀಕರಿಸುತ್ತಿದ್ದೇವೆ.

**ಸಂಸ್ಥೆಯ ಮುಖ್ಯಸ್ಥರ ಸಹಿ ಹಾಗೂ ಮೊಹರು**

(ಸ್ಪಷ್ಟವಾದ ಮೊಹರು ಕೆಳಗೆ ಇರುವ Box ಒಳಗಡೆ ಕಡ್ಡಾಯ ಹಾಕುವುದು)

**ಸಂಸ್ಥೆಯ ವಿಳಾಸ :** ...........................................................

..............................................................................................

..............................................................................................

ದೂರವಾಣಿ ಸಂಖ್ಯೆ : ........................................................

College seal

**ದಿನಾಂಕ :**

**ಸ್ಥಳ :**

**(ವಿ.ಸೂ:– ಅರ್ಜಿಯಲ್ಲಿ ನಮೂದಿಸಿದ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡುವುದು. ಕಾಲೇಜು ಆಡಳಿತಮಂಡಳಿ ಈ ನಮೂನೆಯನ್ನು ನಿರಾಕರಿಸಿದಲ್ಲಿ/ತಿರಸ್ಕರಿಸಿದಲ್ಲಿ ಮೇಲೆ ಕಾಣಿಸಿದ ಅಂಶಗಳನ್ನು ಒಳಗೊಂಡ ಕಾಲೇಜಿನ ದೃಢೀಕರಣವನ್ನು ಸಲ್ಲಿಸುವುದು.)**